ಒಂದೇ ಒಂದು ಆಧಾರವೂ ಕಳೆದು ಹೋಗಬಾರದೆಂಬ ಕಾಳಜಿ ಮಾತ್ರವಿತ್ತೋ ಎಂಬುದನ್ನು ವಿಚಾರ ಮಾಡುವುದೂ ನನಗೆ ಬೇಡವಾಗಿತ್ತು.

ಆದರೇಕೋ ಜ್ವರ ಕೆಮ್ಮು ಎಂದು ಆರಂಭವಾದ ನಿಂಗನ ಕಾಯಿಲೆ ಬಹಳ ಹೆಚ್ಚಾಗಿ ಹೋಗಿತ್ತು. ಆಸ್ಪತ್ರೆಯಲ್ಲಿ ಚಿಕಿತ್ಸೆ ಆರಂಭವಾಗುವ ಮೊದಲೇ ಕೊನೆಯುಸಿರೆಳೆದಿದ್ದ, ನಂತರ ಗೊತ್ತಾಗಿತ್ತು ಅವನ ಪುಪ್ಪುಸಗಳೆರಡೂ ನ್ಯುಮೋನಿಯಾದ ಸೋಂಕಿಗೆ ಸಂಪೂರ್ಣ ಒಳಗಾಗಿದ್ದವೆಂದು. ರಜೆ ಶುರುವಾದೊಡನೆ ನಿಂಗನನ್ನು ಒಮ್ಮೆ ಘಟಪ್ರಭಾದ ಆಸ್ಪತ್ರೆಗೆ ಕರೆದೊಯ್ಯೋಣ ಎಂದು ರವಿ ಕೊಟ್ಟ ಭರವಸೆ ಹಾಗೆಯೇ ಉಳಿದಿತ್ತು. ತುರ್ತು ಕೆಲಸದ ನಿಮಿತ್ತ ಮುಂಬಯಿಗೆ ಹೋಗಬೇಕಾಗಿ ಬಂದಿದ್ದರಿಂದ ಯಶೋದೆಯನ್ನು ಭೇಟಿಯಾಗ ಹೊರಟ ನನ್ನ ಜೊತೆ ಬರಲಾಗದಿದ್ದರೂ ಚೆಕ್ ಬುಕ್ ಕೊಟ್ಟು ರವಿ ಕೈ ಅದುಮಿದ್ದ.

ಯಶೋದೆಯ ಪುಟ್ಟ ಹೆಂಚಿನ ಮನೆಯ ಮುಂದೆ ಹತ್ತಾರು ಜನ ನೆರೆದಿದ್ದರು. ಹಿಂಬದಿಯಿಂದ ಓಲೈಸುವ ಜೀವಗಳಿಲ್ಲದೆ ಕಂಗೆಟ್ಟ ಕರುಗಳ ಅಂಬಾ ಕೂಗು, ನಡುನಡುವೆ ಅಳುತ್ತ, ಮತ್ತೆ ಮಾತಾಡುತ್ತ ಕುಳಿತ ಹೊತ್ತುಹೋಗದ ಜನರತ್ತ ಹೆಚ್ಚು ಗಮನ ಕೊಡದೆ ಸೀದಾ ಒಳನಡೆದೆ. ಕಂಬದ ಮುಂದೆ ದೀಪಕ್ಕೆ ಮುಖ ಮಾಡಿ ಮೊಣಕಾಲಲ್ಲಿ ತಲೆಯಿಟ್ಟು ಕುಳಿತಿದ್ದ ಯಶೋದೆ ನನ್ನ ನೋಡಿದೊಡನೆ ಅಪ್ಪಿಕೊಂಡು ಅಳಲಾರಂಭಿಸಿದಳು. “ಅಕ್ಕಾರs ಹೆಂಗ ನಡುನೀರಾಗ ನಮ್ಮ ಕೈಬಿಟ್ಟು ಹೋದ ನೋಡ್ರಿ ನಿಂಗಪ್ಪ” ಎನ್ನುತ್ತಾ ಪಕ್ಕದಲ್ಲಿ ಕುಳಿತ ಬಾಡಿ ಹೋದ ಮುಖದ ಹದಿನೆಂಟು ಇಪ್ಪತ್ತರ ಬಾಲೆಯ ತಲೆ ಸವರಿದಾಗ ಮೆಲ್ಲನೆ ಕೇಳಿದೆ, “ಯಾರs ಯಶೋದಾ ಇಕೀ?”

“ಅಯ್ಯ ಅಕ್ಕಾರ ನಮ್ಮ ಪಾರೀs, ಪಾರವ್ವರೀ, ನಾಲ್ಕು ತಿಂಗಳ ಬಸುರಿ. ಖೋಡಿಗೆ ಮೊದಲs ಅವ್ವಾ ಅಪ್ಪಾ ಇಲ್ಲ, ನಂಬಿಕೊಂಡಿದ್ದ ನಿಂಗಪ್ಪನೂ ಹೋದ ಮ್ಯಾಲಂತೂ ಪೂರಾ ಅನಾಥ ಆತ್ರಿ. ಅದಕ್ಕ, ನಾನs ಕರಕೊಂಡು ಬಂದೇನ್ರಿ. ಬಾಣಂತನ ನಾನs ಮಾಡ್ತೇನ್ರಿ. ಮುಂದೂ ಇಲ್ಲೇ ನನ್ನ ಕೆಲಸದಾಗ ಕೈ ಕೂಡಿಸಿಕೊಂಡು ನನ್ನ ಜೋಡೀ ಇರತಾಳ್ರಿ” ಎಂದು ಯಶೋದಾ ಕಣ್ಣೊರೆಸಿಕೊಂಡಳು. ಏನು ಹೇಳಲೂ ತೋಚದಾಗಿತ್ತು ನನಗೆ. ನಡುಗುವ ಕೈಗಳಿಂದ ಐದು ಸಾವಿರಕ್ಕೆ ಚೆಕ್ ಬರೆದು ಬೇಡ ಬೇಡವೆನ್ನುತ್ತಿದ್ದ ಯಶೋದೆಯ ಕೈಗೆ ತುರುಕಿ ಹೊರನಡೆದಿದ್ದೆ. “ಪಾರಿ ನಿನಗ ಗೊತ್ತಿಲ್ಲ, ಅಕ್ಕಾರಿಗೆ ಎಲ್ಲಾರ ಮ್ಯಾಲ ಭಾಳ ಅಕ್ಕರೆ. ನನಗ ಖಾತ್ರಿ ಗೊತ್ತದ ನಿನ್ನ ಕೂಸಿಗೆ ಅಂತsನ ಈ ರೊಕ್ಕಾ ಕೊಟ್ಟಾರು. ಸಂಬಂಧ ಇಲ್ಲದವರನ್ನೆಲ್ಲಾ ತಮ್ಮವರನ್ನ ಮಾಡಿಕೊಳ್ಳೋ ಅಂತಃಕರಣಿ ಅವರು, ತಾ ಬ್ಯಾರೆ, ಇನ್ನೊಂದು ಜೀವ ಬ್ಯಾರೆ ಅನ್ನೋ ಪರಕೀಯ ಭಾವನಾ ಇಲ್ಲದ ಶುದ್ಧ ಅಪರಂಜಿ, ಮನಸ್ಸು ಭಾಳ ದೊಡ್ಡದು...'' ಇನ್ನು ಯಶೋದೆಯ ಮಾತು ಕೇಳಲಾಗಲಿಲ್ಲ. ಯಾಕೋ ಕುಬ್ಜಳಾಗುತ್ತಿದ್ದ ಭಾವನೆಯಲ್ಲಿ ಮಂಜಾಗುತ್ತಿದ್ದ ಕನ್ನಡಕ ಒರೆಸಿಕೊಂಡು ಭರಭರನೆ ನಡೆದೆ.


## ಸಪ್ನಾ ಕಟ್ಟಿ

ಲೇಖಕಿ ಮೂಲತಃ ಧಾರವಾಡದವರು. ಕಳೆದ 20 ವರ್ಷಗಳಿಂದ ಪುಣೆಯಲ್ಲಿ ವಾಸ. ಕರ್ನಾಟಕ ವಿಶ್ವವಿದ್ಯಾಲಯದಿಂದ ಭೌತಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ವಿವಿಧ ಪತ್ರಿಕೆಗಳಲ್ಲಿ ಕತೆ, ಕವನ ಮತ್ತು ವಿಮರ್ಶೆಗಳು ಪ್ರಕಟವಾಗಿವೆ.